# ರಾಯರಿಗೆ ಹೃದಯಾಘಾತ

'ನೀವು ಮೇಲೆ ಮಲಗಿ..ನಾನು ಕೆಳಗೆ ಮಲಗ್ತೀನಿ..' ಎಂದರೂ ಅವಳ ಮಾತಿಗೆ ಕಿವಿಗೊಡದೆ ನೆಲದ ಮೇಲೆ ಚಾಪೆ ಹಾಸಿ ಮಲಗಿಕೊಂಡರು. ಅವಳೊಡನೆ ಏನೂ ಮಾತನಾಡದೇ ಹೋದರೂ, ಮುಸುಮುಸು ಅಳುತ್ತ ದಿಂಬನ್ನು ಒದ್ದೆ ಮಾಡುತ್ತಿರುವುದು ಅಪೂರ್ವಳಿಗೆ ಗೋಚರಿಸಿತ್ತು. ಅವರ ನೋವಿನ ಪ್ರಮಾಣದ ಅರಿವಿದ್ದ ಅಪೂರ್ವ, ಅವರನ್ನು ಸಂತೈಸಲೂ ಆಗದೇ, ಅವರು ದುಃಖಿಸುವುದನ್ನು ನೋಡಲೂ ಆಗದೆ ತಳಮಳಿಸಿದಳು.

'ಆಂಟಿ..ಧರ್ಯ ತಂದುಕೊಳ್ಳಿ..ಎಲ್ಲಾ ಸರಿ ಹೋಗುತ್ತೆ..' ಎಂದಷ್ಟೇ ಹೇಳಲು ಶಕ್ತಳಾದಳು.ರಾತ್ರಿಯ ಒಂದು ಹೊತ್ತಿನಲ್ಲಿ ಏನೋ ಬಿದ್ದ ಶಬ್ದವಾದಾಗ ಅಪೂರ್ವಳಿಗೆ ಪಕ್ಕನೆ ಎಚ್ಚರವಾಯಿತು.



ವಿಜಯಕುಮಾರಿ